भारतीय मसाला फसल अनुसंधान संस्थान
कालिकट 12/Calicut -12
सं/No. 40721
तारीख/Date 18/2/15
Indian Institute of Spices Research

ಮಂಗಳೂರು ವಿಶ್ವವಿದ್ಯಾನಿಲಯ

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ- 574199

ಸಂ. ಮಂವಿ/ಶೈಕ್ಷಣಿಕ/ಸಿಆರ್55/2013-14/ಎ2

ದಿನಾಂಕ: 11/2/2015

## ಸುತ್ತೋಲೆ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಪದವಿಯ ವಿನಿಯಮ, 2010- ಮಾರ್ಗಸೂಚಿಗಳ ಬಗ್ಗೆ.

ಉಲ್ಲೇಖ: 1) ಈ ಕಚೇರಿ ಅಧಿಸೂಚನೆ ಸಂಖ್ಯೆ. MU/ACC/CR9/2009-10/A2 ದಿನಾಂಕ 3-9-2010.
2) ಈ ಕಚೇರಿ ಸುತ್ತೋಲೆಗಳ ಸಮ ಸಂಖ್ಯೆ ದಿನಾಂಕ 12-6-2014, 15-10-2014, 6-11-2014 ಮತ್ತು 9-12-2014.
3) ದಿನಾಂಕ 2-2-2015 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧ್ಯಯನ ಮಂಡಳಿ ಅಧ್ಯಕ್ಷರುಗಳ ಸಭೆಯ ನಡಾವಳಿ.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3) ರಲ್ಲಿ ತಿಳಿಸಲಾದ ಸಭೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಪದವಿಯ ಕೋರ್ಸುವರ್ಕಿಗೆ ಸಂಬಂಧಿಸಿದಂತೆ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಗಿರುತ್ತದೆ.

1. ಯುಜಿಸಿ ರೆಗ್ಯುಲೇಶನ್ಸ್ 2009ರ ಪ್ರಕಾರ ಪಿ.ಹೆಚ್.ಡಿ. ಪದವಿಗೆ ಕೋರ್ಸುವರ್ಕ್ ಕಡ್ಡಾಯವಾದುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸಂಶೋಧನಾ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದರ ಮೊದಲು ಕೋರ್ಸುವರ್ಕ್ ಮಾಡಲು ವಿದ್ಯಾರ್ಥಿಗಳಿಗೆ ಅನುಮತಿ ನೀಡುವುದು. ಮಹಾಪ್ರಬಂಧವನ್ನು ಸಲ್ಲಿಸಲು ಅಂತಿಮ ದಿನಾಂಕದೊಳಗೆ ಕೋರ್ಸ್‌ವರ್ಕ್ ಮಾಡಲು ಸಾಧ್ಯವಿಲ್ಲದ ವಿದ್ಯಾರ್ಥಿಗಳು ಪಿಹೆಚ್.ಡಿ. ವಿನಿಯಮದ ಪ್ರಕಾರ ಅವಧಿ ವಿಸ್ತರಣೆ (Extension for submission of Ph.D.) ಗೆ ಅನುಮತಿ ಪಡೆದು ಸದ್ರಿ ಅವಧಿಯೊಳಗೆ ಕೋರ್ಸ್‌ವರ್ಕ್‌ನ್ನು ಪೂರ್ಣಗೊಳಿಸುವುದು. ಮಹಾ ಪ್ರಬಂಧವನ್ನು ಸಲ್ಲಿಸಿದ ನಂತರ ಕೋರ್ಸುವರ್ಕ್‌ನ್ನು ಮಾಡಲು ಅವಕಾಶ ನೀಡಲಾಗುವುದಿಲ್ಲ.

2. ಯುಜಿಸಿ ರೆಗ್ಯುಲೇಶನ್ಸ್ 2009ರಲ್ಲಿ ಕೋರ್ಸ್‌ವರ್ಕನ್ನು ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಮಾತ್ರವಲ್ಲದೆ ಮಾನ್ಯತೆ ಪಡೆದ ಕಾಲೇಜು / ಸಂಸ್ಥೆಗಳಲ್ಲಿಯೂ ನಡೆಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯತೆ ಪಡೆದ ಕಾಲೇಜು / ಸಂಸ್ಥೆಗಳಲ್ಲಿನ ಸಂಶೋಧನಾ ವಿದ್ಯಾರ್ಥಿಗಳು ಬಯಸಿದಲ್ಲಿ ಅಲ್ಲಿನ ಮೂಲಭೂತ ಸೌಕರ್ಯಗಳನ್ನು ಅವಲಂಬಿಸಿಕೊಂಡು ಕೋರ್ಸುವರ್ಕಿಗೆ ಅಲ್ಲಿಯೇ ಹಾಜರಾಗಲು ಅನುಮತಿ ನೀಡುವುದು. ಈ ವಿದ್ಯಾರ್ಥಿಗಳ ಹಾಜರಾತಿಯ ವಿವರವನ್ನು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸಿ ಪರೀಕ್ಷೆಯನ್ನು ವಿಭಾಗದಲ್ಲಿ ನಡೆಸುವುದು.

ಮೇಲಿನ ನಿರ್ಣಯಗಳನ್ನು ಉಲ್ಲೇಖ (2) ರಲ್ಲಿ ತಿಳಿಸಲಾದ ಸುತ್ತೋಲೆಗಳ ಮುಂದುವರಿಕೆಯಾಗಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಕುಲಸಚಿವರು

HRD
16 Feb 15

ಗೆ:

1) ಎಲ್ಲಾ ವಿಭಾಗಗಳ ಅಧ್ಯಕ್ಷರು/ ಕೋರ್ಸುಗಳ ಸಂಯೋಜಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ/ ಮಂಗಳೂರು/ ಮಡಿಕೇರಿ/ ಚಿಕ್ಕ ಅಳುವಾರ.
2) ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ ಸಂಶೋಧನಾ ಕೇಂದ್ರಗಳ ನಿರ್ದೇಶಕರು.
3) ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ.
4) ಕುಲಪತಿಯವರ ಆಪ್ತ ಕಾರ್ಯದರ್ಶಿ/ ಕುಲಸಚಿವರ ಆಪ್ತ ಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ.
5) ಎ3 ವಿಷಯ ನಿರ್ವಾಹಕರು, ಶೈಕ್ಷಣಿಕ ವಿಭಾಗ, ಕುಲಸಚಿವರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ.

Pl. display in HRD page